ಬಾಲ್ಯವಿವಾಹ ನಿಷೇಧಗೊಂಡಿದ್ದರೂ, ಕಾಯ್ದೆಗಳ ಕಣ್ಣುತಪ್ಪಿಸಿ ಎಳೆಯರನ್ನು ಮದುವೆಯ ವರ್ತುಲಕ್ಕೆ ತಳ್ಳಲಾಗುತ್ತಿದೆ. ಅಡೆತಡೆಗಳ ನಡುವೆಯೂ ಕೆಲವು ಬಾಲಕಿಯರು ಶಾಲೆ–ಕಾಲೇಜು ಮುಂದುವರೆಸುವುದಿದೆ. ಅಂಥ ಸಾಹಸಿಗಳಿಗೆ ಶೈಕ್ಷಣಿಕ ಪರಿಸರದಲ್ಲಿ ಪೂರಕ ವಾತಾವರಣವೇನೂ ಇಲ್ಲ. ಹೆಣ್ಣುಮಕ್ಕಳ ಖಾಸಗಿತನ ಹಾಗೂ ಶುಚಿತ್ವಕ್ಕೆ ಪೂರಕವಾದ ಮೂಲಭೂತ ಸೌಕರ್ಯಗಳು ಬಹುತೇಕ ಶಾಲೆ–ಕಾಲೇಜುಗಳಲ್ಲಿಲ್ಲ, ವಿದ್ಯಾರ್ಥಿನಿಯರ ಪಿಸುಮಾತು ಕೇಳಿಸಿಕೊಳ್ಳಲು ಕೆಲವೆಡೆ ಶಿಕ್ಷಕಿಯರೇ ಇರುವುದಿಲ್ಲ. ಪರಿಸ್ಥಿತಿ ಹೀಗಿರುವಾಗ, ಹುಡುಗಿಯರು ಕಲಿಯಬೇಕು, ಕಲಿತು ಮುಂದೆ ಬರಬೇಕೆಂದು ನಿರೀಕ್ಷಿಸುವುದು ಹೇಗೆ? ಮುಟ್ಟಿನ ಕುರಿತು ನಮ್ಮ ಸಮಾಜ ಸಂವೇದನೆ ಬೆಳೆಸಿಕೊಳ್ಳದೆ ಹೋದರೆ ಲಿಂಗಸಂವೇದನೆ, ಸಮಾನತೆ ಎನ್ನುವ ಮಾತುಗಳೆಲ್ಲ ಘೋಷಣೆಗಳಾಗಿಯಷ್ಟೇ ಉಳಿಯುತ್ತವೆ.

■ **ಕೋಡಿಬೆಟ್ಟು ರಾಜಲಕ್ಷ್ಮಿ**

# ಹೆಣ್ಣಿನ ಮುಟ್ಟಿನ ಸುತ್ತ
# ಪೂರ್ವಗ್ರಹಗಳ ಹುತ್ತ
# ಜಡ ಸಂವೇದನೆ–ಚಿತ್ತ
# ಎಲ್ಲಿದೆ ಅರಿವಿನ ಬಿತ್ತ